**ರಾಜೀವ್ ಚಾವ್ಲಾ, ಭಾ.ಆ.ಸೇ.,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ–ಆಡಳಿತ) ಹಾಗೂ
ಮಿಷನ್ ನಿರ್ದೇಶಕರು, ಸಕಾಲ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 106, 1ನೇ ಮಹಡಿ, 2ನೇ ಗೇಟ್
ಬಹುಮಹಡಿ ಕಟ್ಟಡ, ಬೆಂಗಳೂರು–560 001
ಕಛೇರಿ ದೂರವಾಣಿ: 080–22032633/22353953
ಫ್ಯಾಕ್ಸ್ : 22259109
ಇ–ಮೇಲ್: acsegov@karnataka.gov.in

ಸಂಖ್ಯೆ._ಸಿಆಸುಇ 233 ಇಜಿವಿ 2020 ದಿನಾಂಕ: 22.03.2021

ಪ್ರಿಯ ಶ್ರೀಮತಿ ರಶ್ಮಿ ಮಹೇಷ್ ರವರೆ,

ವಿಷಯ: "ಮಾಹಿತಿ ಕಣಜ" ತಂತ್ರಾಂಶ ಕುರಿತು..

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 233 ಇಜಿವಿ 2020
ದಿನಾಂಕ: 24-9-2020
2) ಅ.ಸ.ಪ. ಸಿಆಸುಇ 233 ಇಜಿವಿ 2020 ದಿನಾಂಕ: 29-12-2020

------

"ಮಾಹಿತಿ ಕಣಜ" ತಂತ್ರಾಶವನ್ನು ಅಭಿವೃದ್ಧಿಪಡಿಸಿ, ಏಕರೂಪ ತಂತ್ರಾಂಶವನ್ನು ಎಲ್ಲಾ ಇಲಾಖೆಗಳು/ ಸಂಸ್ಥೆಗಳಿಗೆ ವಿಸ್ತರಿಸಿ ಅನುಷ್ಠಾನಗೊಳಿಸಲು ಎಲ್ಲಾ ಇಲಾಖೆಗಳ ಮಾಹಿತಿಯನ್ನು ಇ-ಆಡಳಿತ ಕೇಂದ್ರಕ್ಕೆ ನಿಯಮಿತವಾಗಿ ಒದಗಿಸುವ ಉದ್ದೇಶಕ್ಕಾಗಿ ಸಚಿವಾಲಯ ಮಟ್ಟದಲ್ಲಿ ಹಾಗೂ ಇಲಾಖಾ ಮಟ್ಟದಲ್ಲಿ ಒಬ್ಬ ನೋಡಲ್ (ಸಮನ್ವಯ) ಅಧಿಕಾರಿಯನ್ನು ನೇಮಿಸಬೇಕೆಂದು ಕೋರಿ ತಮಗೆ ಬರೆದಿರುವ ಉಲ್ಲೇಖ (2) ರಲ್ಲಿನ ಅರೆ ಸರ್ಕಾರಿ ಪತ್ರದ ಕಡೆಗೆ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಅದರನ್ವಯ ಸಚಿವಾಲಯ ಇಲಾಖಾ ಮಟ್ಟದಲ್ಲಿ ಹಾಗೂ ಇಲಾಖೆಯಡಿಯಲ್ಲಿನ ಈ ಕೆಳಕಂಡ ಕೆಲವು ಕ್ಷೇತ್ರ ಇಲಾಖೆ/ ನಿಗಮ/ ಮಂಡಳಿ/ಆಯೋಗ /ಪ್ರಾಧಿಕಾರ/ಸ್ವಾಯತ್ತ ಸಂಸ್ಥೆಗಳು ಹಾಗೂ ಸರ್ಕಾರದಿಂದ ಭಾಗಶಃ /ಪೂರ್ಣ ಅನುದಾನ ಪಡೆಯುತ್ತಿರುವ ಇಲಾಖೆಗಳ ನೋಡಲ್ (ಸಮನ್ವಯ) ಅಧಿಕಾರಿಗಳನ್ನು ನೇಮಿಸಿರುವ ವಿವರಗಳು ಮಾಹಿತಿ ಕಣಜ ತಂತ್ರಾಶಕ್ಕೆ ದೊರೆತಿದೆ:

1) ಶ್ರೀಮತಿ ಶೃತಿ ಎಸ್. ಪ್ರಥಮ ದರ್ಜೆ ಸಹಾಯಕರು, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಅಲೆಮಾರಿ ಹಾಗು ಅರೆ ಅಲಮಾರಿ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ದಿನಾಂಕ 20-02-2021 ರಂದು ಮಾಹಿತಿ ಕಣಜ ತಂತ್ರಾಶದ ಉದ್ದೇಶ, ಪ್ರಯೋಜನ, ಧ್ಯೇಯಗಳ ಕುರಿತು ಯೋಜನಾ ನಿರ್ದೇಶಕರು ಮತ್ತು ಯೋಜನಾ ವ್ಯವಸ್ಥಾಪಕರು, ಮೇಲ್ಕಂಡ ಇಲಾಖೆಗಳ ನೋಡಲ್ ಅಧಿಕಾರಿಗಳೊಂದಿಗೆ ಪ್ರಥಮ ಸಭೆಯನ್ನು ನಡೆಸಿದ್ದು ಸಭೆಯ ನಡವಳಿಗಳನ್ನು ಕಳುಹಿಸಲಾಗಿದೆ. ಮಾಹಿತಿ ಕಣಜ ಅಂತರಜಾಲ ತಂತ್ರಾಂಶಕ್ಕೆ ಇಲಾಖೆಗಳು ಯಾವ ರೀತಿಯಲ್ಲಿ ಮಾಹಿತಿಯನ್ನು ನೀಡಬೇಕಾಗುತ್ತದೆ ಎಂಬುದರ ಬಗ್ಗೆ draft template ಅನ್ನು ಎಲ್ಲಾ ಅಧಿಕಾರಿಗಳಿಗೆ ನೀಡಲಾಗಿದೆ ಹಾಗು ಈ ಮಾಹಿತಿಯನ್ನು digiitized ರೂಪದಲ್ಲಿ API ಮುಖಾಂತರ ಒದಗಿಸಬೇಕಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

ಇಲಾಖೆಗಳಲ್ಲಿ ಲಭ್ಯವಿರುವ ಮಾಹಿತಿಗಳು digiitized ರೂಪದಲ್ಲಿ ದತ್ತಾಂಶ ಇಲ್ಲವಾದಲ್ಲಿ ಅಥವಾ ಕೇಂದ್ರೀಕೃತ ದತ್ತಾಂಶ ಇಲ್ಲದಿದ್ದರೆ ಮಾಹಿತಿ ಕಣಜ ತಂತ್ರಾಶದಲ್ಲಿ ಇಲಾಖೆಯ ಮಾಹಿತಿಯನ್ನು ಅಳವಡಿಸಲು ಸಾಧ್ಯವಾಗುವುದಿಲ್ಲ ಕರ್ನಾಟಕ ರಾಜ್ಯ ಮತ್ತು ಅದರ ಜನತೆಗಾಗಿ ಸಾರ್ವಜನಿಕ ನಿಧಿಗಳನ್ನು ಹೇಗೆ ಬಳಸಲಾಗುತ್ತಿದೆ ಎಂಬ ಬಗ್ಗೆ ಸಾರ್ವಜನಿಕರು ತಿಳಿಯುವ ಅಧಿಕಾರವನ್ನು ಒದಗಿಸುವ ಏಕಗವಾಕ್ಷಿ ಮತ್ತು ಏಕೀಕೃತ ವೆಬ್ ಪೋರ್ಟಲ್ ಅನ್ನು ಜನತೆಗೆ ಅರ್ಪಿಸುವ ಉದ್ದೇಶ ಪೂರ್ಣವಾಗಿ ಯಶಸ್ವಿಯಾಗುವುದಿಲ್ಲ. ಆದ್ದರಿಂದ ದಯವಿಟ್ಟು ಇಲಾಖೆಗಳಲ್ಲಿ ಲಭ್ಯವಿರುವ ಮಾಹಿತಿಯನ್ನು digitized ರೂಪಕ್ಕೆ ಪರಿವರ್ತಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ. ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ / ಅಧಿಕಾರಿಗಳಿಗೆ ಕೂಡಲೇ ಈ ಬಗ್ಗೆ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ.

ಶುಭಾಷಯಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀಮತಿ ವಿ. ರಶ್ಮಿ ಮಹೇಶ್, ಭಾಆಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸ ಸೌಧ, ಬೆಂಗಳೂರು

ಪ್ರತಿ: 1) ಶ್ರೀ ವಸಂತ ಕುಮಾರ್, ಭಾಆಸೇ, ಆಯುಕ್ತರು, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ, ಬೆಂಗಳೂರು - ಮುಂದಿನ ಕ್ರಮಕ್ಕಾಗಿ.

2) ಡಾ: ಕೆ.ಎನ್ ವಿಜಯಪ್ರಕಾಶ್, ವ್ಯವಸ್ಥಾಪಕ ನಿರ್ದೇಶಕರು, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಅಲೆಮಾರಿ ಹಾಗು ಅರೆ ಅಲಮಾರಿ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು - ಮುಂದಿನ ಕ್ರಮಕ್ಕಾಗಿ.

3) ಶ್ರೀಮತಿ ದೀಪಶ್ರೀ ಕೆ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು - ಮುಂದಿನ ಕ್ರಮಕ್ಕಾಗಿ.